# ನೀವು ಕೇಳಿದಿರಿ?

ಸುಧೀಂದ್ರ, ಬೆಂಗಳೂರು
ದೇವಸ್ಥಾನದಲ್ಲಿ ದೇವರ ದರ್ಶನಕ್ಕಿಂತ ಭಕ್ತಾದಿಗಳ ಮೊಬೈಲ್ ದರ್ಶನವೇ ಜಾಸ್ತಿಯಾಗಿದೆಯಲ್ಲ…?



ಸರಿಯೇ. ಅಂತಹ ರಷ್‌ನಲ್ಲಿ ಝೂಮ್ ಮಾಡಿ ಸೆಲ್ಫಿ ವಿತ್ ಗಾಡ್ ತೆಗೆಯಬೇಕಲ್ಲ!

ಎಸ್.ಸಿ. ರಮೇಶ್, ಮೈಸೂರು
ಬೆವರು ಸುರಿಸದ ರಾಜಕಾರಣಿಗಳ ಆಸ್ತಿ 5 ವರ್ಷದಲ್ಲಿ 10 ಪಟ್ಟು ಆಗುವುದು ಹೇಗೆ?
ಸುತ್ತಲಿನ ಬಾವಿಗಳನ್ನೆಲ್ಲ ಬರಿದು ಮಾಡುವ 'ಡೀಪ್ ಬೋರ್‌ವೆಲ್ ಬುದ್ಧಿ'ಯಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
ಶಿಕ್ಷಣ ಮಂತ್ರಿಗೆ ಓದು–ಬರಹ ಗೊತ್ತಿರಬೇಕು. ಅಬಕಾರಿ ಮಂತ್ರಿಗೆ?
'ಟೈಟ್' ಷೆಡ್ಯೂಲ್ ಇರಬೇಕು.

ಶ್ರೀನಿವಾಸ ಕೆ, ಬೆಂಗಳೂರು
ಬೆಳಕು, ಕತ್ತಲೆ; ಇವೆರಡರಲ್ಲಿ ಶಾಶ್ವತ ಯಾವುದು?



ಪ್ರತಿಜೀವಿಯೂ ಕಡೆಗೆ ಕಣ್ಮುಚ್ಚುವುದರಿಂದ, ಕತ್ತಲೆಯೇ!

ಎಚ್.ಎಸ್. ನಂದಕುಮಾರ್, ಮಂಡ್ಯ
ಎಲ್ಲವನ್ನೂ ಪ್ರಶ್ನಿಸುವವರಿಗೂ, ಏನನ್ನೂ ಪ್ರಶ್ನಿಸದವರಿಗೂ ವ್ಯತ್ಯಾಸವೇನು?
ಅವರು ಮರ್ಕ್ಯುರಿ, ಇವರು ಕುರಿ.

ಜಗದೀಶ ಬಿ. ಹೊಸೂರು, ಮೈಸೂರು
ನಿರೂಪಕರು ಎಷ್ಟೇ ಕೇಳಿಕೊಂಡರೂ ಜನ ಚಪ್ಪಾಳೆ ಹೊಡೆಯುವುದಿಲ್ಲ. ಏಕೆ?
ಅಲ್ಲಿನ ಪ್ರದರ್ಶನವು ಕೈ ಜೋಡಿಸುವುದಕ್ಕಿಂತ ಕೈ ಎತ್ತಿ ಹೊಡೆಯುವಂತಿರುತ್ತಂತೆ!

ಮಾಲತೇಶ್ ಪಾಟೀಲ್, ಹುಬ್ಬಳ್ಳಿ
ಹೈಕೋರ್ಟ್‌ನಲ್ಲಿ ಸಿಗದ ಜಾಮೀನು ಸುಪ್ರೀಂನಲ್ಲಿ ಸಿಗುತ್ತದಲ್ಲಾ, ಅಲ್ಲಿ ಸೆಕ್ಷನ್ನುಗಳು ಬೇರೆಯಿರುವುವೆ?
ವ್ಯಾಖ್ಯಾನದ ಸೆಲೆಕ್ಷನ್‌ಗಳು ಬೇರೆಯಿರುತ್ತವೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಸರ್ಕಾರಿ ಕಚೇರಿಗಳಲ್ಲಿ ಲಂಚವು ಸಂಪೂರ್ಣವಾಗಿ ನಿಂತುಹೋದರೆ ನಮ್ಮ ಅರ್ಜಿಗಳು ವಿಲೇವಾರಿ ಆಗಬಹುದೆ?
ಊಹೂಂ. ಅಂದು ಸರ್ಕಾರಿ ರಜಾ ದಿನವಾಗಿರುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ
ದೇವಾನುದೇವತೆಗಳು ಪ್ರಾಣಿಪಕ್ಷಿಗಳನ್ನು ತಮ್ಮ ವಾಹನಗಳನ್ನಾಗಿ ಏಕೆ ಮಾಡಿಕೊಂಡರು?
ಪ್ರಾಣಿಪಕ್ಷಿಗಳನ್ನು ಮನುಷ್ಯರಿಂದ ದೇವರೇ ಕಾಪಾಡಬೇಕೆಂದು ಅವರಿಗೆ ಅಂದೇ ತಿಳಿದಿದ್ದರಿಂದ.

ಎಲ್.ಐ.ಸಿ. ವಿಜೇಂದ್ರ, ಮೈಸೂರು
ಡ್ಯೂಟಿಗೆ ಬರುವ ಲೇಡಿ ಡಾಕ್ಟರುಗಳೇಕೆ ಮದುವೆ ಮನೆಗೆ ಡ್ರೆಸ್ ಮಾಡಿಕೊಂಡು ಬರುವಂತೆ ಬರುವರು?
ನೋಯುವಂತಹ ಚಿಕಿತ್ಸೆ ಕೊಡುವಾಗ ಬೇರೆಡೆಗೆ ಗಮನ ಸೆಳೆಯಲು.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಪ್ರೈವೆಸಿಗೂ, ಪ್ರೇಯಸಿಗೂ ಇರುವ ವ್ಯತ್ಯಾಸವೇನು?
ಕಾಂತದಲ್ಲಿ ಕಾಂತೆ ಇದ್ದರೆ ಸೂರು. ಕಾಂತೆಯೇ ಏಕಾಂತದಲ್ಲಿದ್ದರೆ ಬೇಜಾರು.

ವಿ. ಹೇಮಂತಕುಮಾರ್, ಬೆಂಗಳೂರು
ಡ್ಯೂಟಿ ಮತ್ತು ಬ್ಯೂಟಿ ಎರಡೂ ನಾವು ಬಯಸಿದಂತೆ ಸಿಗುವುದಿಲ್ಲ ಅಲ್ಲವೇ?
ನಮ್ಮ ಯೋಗ್ಯತೆಯನ್ನು ಮೀರಿ ಬಯಸುವುದೇ ಅದಕ್ಕೆ ಕಾರಣವಂತೆ.

ಡಾ. ಸಮೀರ ಹಾದಿಮನಿ, ಅಲಮೇಲ
ಇತ್ತೀಚೆಗೆ 'ನಾಯಿ ಇದೆ ಎಚ್ಚರಿಕೆ' ಎಂಬ ಬೋರ್ಡು ಕಾಣುತ್ತಿಲ್ಲವಲ್ಲ?
ನಾಯಿ ಎಚ್ಚರವಿಲ್ಲದಂತೆ ನಿದ್ರಿಸಿದಾಗ ಬೋರ್ಡನ್ನು ಕದಿಯಲಾಗಿದೆಯಂತೆ.

## ಬಹುಮಾನಿತ ಪ್ರಶ್ನೆ

ಗಣೇಶ ಎಂ. ಪೈ, ಬೆಂಗಳೂರು
ಕಾಲಾತೀತ ಭಾಷಣಕಾರರಿಂದ ಉದ್ಘಾಟನೆ. ಸಮಾರಂಭ ಹಾಳಾಗುವ ಭಯವಿದೆ. ಸಲಹೆ?
ಅವರ ಸತಿಯನ್ನು ಮುಂದಿನ ಸಾಲಿನಲ್ಲಿ ಕೂರಿಸಿ. ತಂತಾನೇ ಮಾತು ನಿಲ್ಲುತ್ತದೆ.

ಬಿ.ಆರ್. ಉಷಾ, ಟೊರೊಂಟೊ
ಹೆಣ್ಣು ಮುನಿದರೆ ಮಾರಿ. ಗಂಡು ಮುನಿದರೆ?
ಹೊರಕ್ಕೆ ದಾರಿ!

ಉದಯ ಎಸ್ಕೆ, ಬೆಳಗಾವಿ
'ನಮ್ಮಲ್ಲೇ ಮೊದಲು', 'ನಮ್ಮದೇ ಇಂಪ್ಯಾಕ್ಟ್', 'ನಾವೇ ನಂ.1' ಇತ್ಯಾದಿ ಕೂಗುಸ್ಪರ್ಧೆಯನ್ನು ವಾಹಿನಿಗಳಿಗೆ ಇಟ್ಟವರಾರು?
ಅರಚುವಿಕೆಯನ್ನು ಅರಸಿ ಆರಿಸಿ ಹಾರೈಸಿದ ವೀಕ್ಷಕರು!

ಜಾನ್ ಕಿರಣ್, ಬೆಂಗಳೂರು
'ರಸ್ತೆಗೆ ಕಸ ಎಸೆತ ಸ್ಪರ್ಧೆ' ಹೇಗಿದೆ?



ಉಗಿತ, ಅಗೆತಗಳನ್ನೂ ಸೇರಿಸಿ ಟ್ರೈಯತ್ಲಾನ್ ಮಾಡಿಬಿಡಿ.

ರತ್ನಜ, ಮೈಸೂರು
ಕೆಲವರು ಬಿಚ್ಚಮ್ಮಗಳಾಗುತ್ತಿರುವುದಕ್ಕೆ ಕಾರಣವೇನು?
ಗ್ಲೋಬಲ್ ವಾರ್ಮಿಂಗ್ ಅನ್ನು ಬಿಚ್ಚುಮನಸ್ಸಿನಿಂದ ಸ್ವಾಗತಿಸಲಂತೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಬಹುಮಾನದ ಆಸೆಗೆ ಪ್ರಶ್ನೆ ಕೇಳುವವರ ಸಂಖ್ಯೆ ಜಾಸ್ತಿ ಇರಬಹುದಾ ರಾಮ್?
ಊಹೂಂ. ಗುಣದಿಂದ ಶ್ರೀಮಂತರಾದ ಇಲ್ಲಿನ ಪೃಚ್ಛಕರಿಗೆ ಹಣ ಬೈಪ್ರಾಡಕ್ಟ್ ಅಷ್ಟೆ.

ಅನಸೂಯಾ ಟಿ, ಕೇದಿಗೆಮನೆ
ವೃದ್ಧಾಶ್ರಮ ಹೆಚ್ಚಾಗಲು ಮಕ್ಕಳು ಕಾರಣವೋ, ತಂದೆತಾಯಿಗಳೋ?
'ತಂದೆತಾಯಿಗಳೇ. ಅವರು ವೃದ್ಧರಾಗುವವರೆಗೆ ಏಕೆ ಬದುಕಬೇಕಿತ್ತು?' ಎಂದನಾ ಮಾಡ್ರನ್ ಮಗ.

■ ರಾಮ್